**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**

**ತಿ. ನರಸೀಪುರ**

**ಸಿ ಸಿ ಸಂಖ್ಯೆ: 731/2022**

**ಆಪಾದನೆ**

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್ಎಲ್.ಎಮ್., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ತಿ. ನರಸೀಪುರ ಆದ ನಾನು

1. ಬಿ ಎಸ್ ಬಾಲಸುಬ್ರಮಣ್ಯ ಬಿನ್ ಬಿ ಎಂ ಸಿದ್ದೇಗೌಡ
   37 ವರ್ಷ, ವಾಸಃ ಬಿಳಿಗೆರೆ ಹುಂಡಿ ಗ್ರಾಮ
   ಟಿ ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

2. ಶ್ರೀಮತಿ ವಿಜಯ ಕೋಂ ಲೇ ಬಿ ಸುರೇಂದ್ರ
   51 ವರ್ಷ, ವಾಸಃ ಮುತ್ತತಿ ಗ್ರಾಮ, ತಿ ನರಸೀಪುರ
   ತಾಲ್ಲೂಕು, ಮೈಸೂರು ಜಿಲ್ಲೆ.

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ಆಪಾದನೆ ಎನೆಂದರೆ–

ದಿನಾಂಕ : 22.01.2021 ರಂದು ಮಧ್ಯಾಹ್ನ 12–45 ಗಂಟೆ ಸಮಯದಲ್ಲಿ ತಿ.ನರಸೀಪುರ ಪೊಲೀಸ್ ಠಾಣೆ ವ್ಯಾಪ್ತಿಯ, ತಿ. ನರಸೀಪುರ ತಾಲ್ಲೂಕಿನ ಆರ್ ಪಿ ಹುಂಡಿ ಗ್ರಾಮದ ಬಳಿ, ಗರ್ಗೇಶ್ವರಿ – ರಂಗ ಸಮುದ್ರ ರಸ್ತೆಯಲ್ಲಿ,1 ನೇ ಆರೋಪಿತರಾದ ನೀವು ಟ್ರಾಕ್ಟರ್ ಸಂಖ್ಯೆಃಕೆಎ–55–ಟಿ–637 ಮತ್ತು ಟ್ರೇಲರ್ ಸಂಖ್ಯೆಃ ಕೆಎ–55–ಟಿ–638 ನ್ನು ಗರ್ಗೇಶ್ವರಿ ಕಡೆಯಿಂದ ರಂಗಸಮುದ್ರದ ಕಡೆಗೆ ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿ ರಂಗಸಮುದ್ರ ಕಡೆಯಿಂದ ಬರುತ್ತಿದ್ದ ಹೊಂಡಾ ಆಕ್ಟಿವಾ ಸ್ಕೂಟರ್ ಸಂಖ್ಯೆ : ಕೆಎ.09/ಹೆಚ್ಕೆ.3202 ಕ್ಕೆ ಢಿಕ್ಕಿ ಮಾಡಿ, ಅದರ ಸವಾರ ಎಸ್ ಉದಯಬಂಗಾರಪ್ಪರವರ ತಲೆ ಮತ್ತು ದೇಹದ ಇತರ ಭಾಗಗಳಿಗೆ ಗಾಯಪಡಿಸಿ, ಅವರ ಮರಣವನ್ನು ಉಂಟು ಮಾಡಿದ್ದು ಮತ್ತು ಆ ಮೋಟಾರ ಸೈಕಲ್‌ನ ಹಿಂಬದಿ ಸವಾರರಾದ ಚಾಸಾ–

2 ಲೋಕೇಶ್‌ರವರಿಗೆ ಸಾಧಾ ಮತ್ತು ತೀವ್ರ ಸ್ವರೂಪದ ಗಾಯ ಪಡಿಸುವ ಮೂಲಕ ಹಾಗೂ ಅಪಘಾತ ಮಾಡಿದ ನಂತರ ಗಾಯಾಳುಗಳಿಗೆ ಚಿಕಿತ್ಸೆ ಕೊಡಿಸದೆ ಮತ್ತು ಅಪಘಾತದ ಮಾಹಿತಿಯನ್ನು ಪೊಲೀಸರಿಗೆ ತಿಳಿಸದೆ ಟ್ರಾಕ್ಟರ್ ಮತ್ತು ಟ್ರೈಲರ್‌ನ್ನು ಸ್ಥಳದಲ್ಲಿಯೇ ಬಿಟ್ಟು ಪರಾರಿಯಾಗುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ. 279, 337, 338, 304–ಎ ಮತ್ತು ಮೋಟಾರು ವಾಹನ ಕಾಯ್ದೆ ಕಲಂ 187 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

2 ನೇ ಆರೋಪಿಯಾದ ನೀವು ಸದರಿ ಮೋಟಾರ್ ಸೈಕಲ್‌ನ ಮಾಲೀಕರಾಗಿದ್ದು, ಅದಕ್ಕೆ ವಿಮೆ ಮಾಡಿಸದೇ ಮತ್ತು ಚಾಲನಾ ಪರವಾನಗೆ ಇಲ್ಲದಿರುವ ಮೃತ ಎಸ್. ಉದಯಬಂಗಾರಪ್ಪರವರಿಗೆ ಚಾಲನೆ ಮಾಡಲು ಅವಕಾಶ ಮಾಡಿಕೊಡುವ ಮೂಲಕ ಮೋಟಾರು ವಾಹನ ಕಾಯ್ದೆ ಕಲಂ 180 ಮತ್ತು 196 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆಃ ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರಃ ಹೌದು.

ಪ್ರಶ್ನೆಃ ನೀವು ಸದರಿ ಆಪಾದನೆಯನ್ನು ಒಪ್ಪಿಕೊಳ್ಳುತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರಃ ವಿಚಾರಣೆಯಾಗಬೇಕು.

(ಮೇಲಿನ ಆಪಾದನೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿನಾಂಕಃ 26.10.2023

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ತಿ.ನರಸೀಪುರ.